# 2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ
# ಉತ್ತರ ಕನ್ನಡ : ಕಾರವಾರ

**S C No**. 22/2021

**ದೋ.ಸಾ–00** **ಫ್ರಾ.ಸಾ. : 29**

| | | |
|---|---|---|
| ಸಾಕ್ಷಿಯ ಹೆಸರು | : | ಉದಯ ಕುಮಾರ್ ಮಗ್ದುರ್ |
| ತಂದೆಯ ಹೆಸರು | : | ಗುತ್ತೆಪ್ಪ ಮುಗದುಮ್ |
| ವಯಸ್ಸು | : | 41 ವರ್ಷ |
| ಕೆಲಸ | : | ಮುಖ್ಯ ಪೇದೆ, ಕಾರಾವಾರ ಗ್ರಾಮೀಣ ಪೊಲೀಸ್ ಠಾಣೆ |
| ವಾಸ | : | ಕಾರವಾರ. |

**(ಸರ್ಕಾರಿ ಅಭಿಯೋಜಕರು ದಂಡ ಪ್ರಕ್ರಿಯಾ ಸಂಹಿತೆ ಕಲಂ–311 ರಡಿಯಲ್ಲಿ ಅರ್ಜಿಯನ್ನು ಸಲ್ಲಿಸಿ, ಈ ಸಾಕ್ಷಿದಾರರನ್ನು ವಿಚಾರಣೆ ಮಾಡಲು ಕೋರಿಕೊಂಡಿದ್ದು, ಸದರಿ ಅರ್ಜಿ ಪುರಸ್ಕರಿಸಲ್ಪಟ್ಟ ಮೇರೆಗೆ, ಸಾಕ್ಷಿಯ ವಿಚಾರಣೆ.)**

**ದಿನಾಂಕಃ** 10.02.2026 **ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದ:–**

1. 2016 ರಿಂದ 2023 ರವರೆಗೆ ನಾನು ಹೊನ್ನಾವರ ಪೊಲೀಸ್ ಠಾಣೆಯಲ್ಲಿ ಮುಖ್ಯ ಪೇದೆ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ. ದಿನಾಂಕ 03.05.2021 ರಂದು ತನಿಖಾಧಿಕಾರಿಯಾದ ಚಾಸಾ–39 ರವರ ಸೂಚನೆಯಂತೆ ಘಟನಾ ಸ್ಥಳದ ಪಂಚನಾಮೆಯ ಸ್ಥಳದಲ್ಲಿ ಹಾಜರಿದ್ದು, ಸ್ಥಳವನ್ನು ನೋಡಿರುತ್ತೇನೆ. ಆನಂತರ ದಿ.04.05.2021 ರಂದು ಆರೋಪಿಯು ತಾನು ಕೃತ್ಯಕ್ಕ ಬಳಸಿದಿ ಚಾಕು ಹಾಗು ಘಟನೆ ಕಾಲಕ್ಕೆ ತಾನು ಧರಿಸಿದ ಲುಂಗಿಯನ್ನು ಬಚ್ಚಿಟ್ಟ ಸ್ಥಳದ ಪಂಚನಾಮೆ ಮಾಡುವ ಕಾಲಕ್ಕೆ ಹಾಜರಿರುತ್ತೇನೆ. ಆನಂತರ ದಿ.28.07.2021 ರಂದು ತನಿಖಾಧಿಕಾರಿಯ ಸೂಚನೆ ಮೇರೆಗೆ ಲೋಕೋಪಯೋಗಿ ಇಲಾಖೆಯ ಸಹಾಯಕ ಇಂಜೀನಿಯರ್ ಆದ ಚಾಸಾ–41 ರವರನ್ನು ಕರೆದುಕೊಂಡು ಹೋಗಿ ಘಟನಾ ಸ್ಥಳ ಮತ್ತು ಆರೋಪಿಯು ಚಾಕು ಮತ್ತು ಲುಂಗಿ ಬಚ್ಚಿಟ್ಟ ಸ್ಥಳವನ್ನು ತೋರಿಸಿರುತ್ತೇನೆ. ಆನಂತರ ಚಾಸಾ–41 ರವರು ಸದರಿ ಸ್ಥಳಗಳನ್ನು ಪರೀಶಿಲಿಸಿ, ಘಟನಾ ಸ್ಥಳದ ನಕಾಶೆಯನ್ನು ನಿಪಿ–69 ರಂತೆ

ಹಾಗೂ ಚಾಕು ಮತ್ತು ಲುಂಗಿ ಬಚ್ಚಿಟ್ಟ ಸ್ಥಳದ ನಕಾಶೆಯನ್ನು ನಿಪಿ–70 ರಂತೆ ಮಾಡಿರುತ್ತಾರೆ. ಸದರಿ ನಕಾಶೆಗಳಿಗೆ ನಾನೂ ಸಹ ಸಹಿ ಮಾಡಿರುತ್ತೇನೆ. ಸದರಿ ನಕಾಶೆಗಳಲ್ಲಿರುವ ಸಾಕ್ಷಿಯ ಸಹಿಗಳನ್ನು ನಿಪಿ–69(ಬಿ) ಮತ್ತು ನಿಪಿ–70(ಬಿ) ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಆರೋಪಿ ಪರ ಸಿ.ಎಲ್.ಎ.ಡಿ.ಸಿ ರವರಿಂದಃ**

2. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿರುವ 2 ಸ್ಥಳಗಳ ಪಂಚನಾಮೆ ಸಮಯದಲ್ಲಿ ನಾನು ಹಾಜರಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಚಾಸಾ–41 ರವರನ್ನು ಕರೆದುಕೊಂಡು ಹೋಗಿ ಯಾವುದೇ ಸ್ಥಳಗಳನ್ನು ತೋರಿಸಿಲ್ಲ, ಹಾಗೂ ಅವರು ಯಾವುದೇ ನಕಾಶೆಗಳನ್ನು ತಯಾರಿಸಿಲ್ಲ ಎಂದರೆ ಸರಿಯಲ್ಲ. ನಾನು ನನ್ನ ಮೇಲಾಧಿಕಾರಿಗಳ ಮಾತು ಕೇಳಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ.)

ಓ.ಹೇ.ಕೇ.ಸ.ಇ.

(ಮಾಯಣ್ಣ ಬಿ.ಎಲ್.)
2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉತ್ತರಕನ್ನಡ, ಕಾರವಾರ